

## ಕನಕರಾಜ್ ಆರನಕಟ್ಟೆ

ಚಿತ್ರದುರ್ಗ ಜಿಲ್ಲೆಯ ಕನಕರಾಜ್ ಆರನಕಟ್ಟೆ ಸಾಹಿತ್ಯ ಮತ್ತು ದೃಶ್ಯ ಮಾಧ್ಯಮದಲ್ಲಿ ಹೊಸ ಸಾಧ್ಯತೆಗಳ ಹುಡುಕಾಟದಲ್ಲಿ ಇರುವವರು. ಕನ್ನಡದೊಂದಿಗೆ ತಮಿಳಿನಲ್ಲೂ ಬರೆಯುವ ಕನಕರಾಜ್, ಪ್ರಸ್ತುತ ಸೌದಿ ಅರೇಬಿಯಾದ ಪ್ರಿನ್ಸ್ ಸತ್ತಾಮ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಿಸುತ್ತಿದ್ದಾರೆ. 'ಸಿಲೋನ್ ಸೈಕಲ್' ಅವರ ಕಥಾಸಂಕಲನ. 'ಬರ್ಮಾ ಎಕ್ಸ್‌ಪ್ರೆಸ್' ಕಿರುಚಿತ್ರ ಅವರನ್ನು ಹಲವು ದೇಶಗಳ ಚಿತ್ರೋತ್ಸವಗಳಿಗೆ ಕರೆದೊಯ್ದಿದೆ ಹಾಗೂ ಪುರಸ್ಕಾರಗಳನ್ನು ದೊರಕಿಸಿಕೊಟ್ಟಿದೆ. 'ಪ್ರಜಾವಾಣಿ' ಕಥಾಸ್ಪರ್ಧೆಯ ಬಹುಮಾನ ಸೇರಿದಂತೆ ಹಲವು ಗೌರವಗಳಿಗೆ ಪಾತ್ರರು.

**ಸಬೆಟೊ ಥರಹದ ಬರಹಗಾರರಿಂದ ವ್ಯಾಪಿಸಿಕೊಂಡಿರುವ ದಕ್ಷಿಣ ಅಮೆರಿಕದ ಸಾಹಿತ್ಯ ವಲಯಗಳ ಬಗ್ಗೆ ಸೂಚ್ಯವಾಗಿ ಮಾತಾಡಿದ್ದೀರಿ. ಅದೇ ರೀತಿ ಬೋರ್ಹೆಸ್ ಮತ್ತು ನಿಮ್ಮ ತಾಯಿ ಇಬ್ಬರೂ ಸೇರಿ ಬರೆದ ಕಥೆಯೊಂದರ ಪ್ರಸ್ತಾಪವನ್ನೂ ಮಾಡಿದ್ದೀರಿ. ಆ ಮಾತುಕತೆಯ ಹಿನ್ನೆಲೆಯಲ್ಲಿ ನನ್ನ ಪ್ರಶ್ನೆ. ಅಲ್ಲಿ ನೀವು ಹೇಳಿರುವ ಹಾಗೆ ಬರೆಯುವ ಕ್ರಿಯೆ ಸದಾ ಸಂತೋಷವನ್ನು ನೀಡುವ ಕ್ರಿಯೆಯೇ? ಅಥವಾ ನೀವು ಅದನ್ನು ನೋವುಣ್ಣುವ ಅನುಭವ ಎಂದು ಭಾವಿಸಿದ್ದೀರಾ? ಈ ಪ್ರಶ್ನೆಯನ್ನು ಮತ್ತಷ್ಟು ವಿಸ್ತರಿಸಿ ಹೇಳುವುದಾದರೆ, ಕಥೆಯೊಂದರಲ್ಲಿ ವಾಕ್ಯವೊಂದನ್ನು ಬರೆಯುತ್ತಿರುವಾಗ ಮುಂದಿನ ಸಾಲು ಹೇಗೆ ಬರೆಯುವುದೆಂಬುದು ತೋಚದೆ 'ಕಾಯಬೇಕಾದ' ಆ ಗಳಿಗೆಯನ್ನು ನೀವು ಹೇಗೆ ನಿಭಾಯಿಸುತ್ತೀರಿ? ಇಷ್ಟು ವರ್ಷಗಳ ನಿಮ್ಮ ಬರವಣಿಗೆಯ ಅನುಭವದಲ್ಲಿ ಬರಹಗಾರರ ಜಡತೆ ಎಂಬುದನ್ನು ಅನುಭವಿಸಿದ್ದೀರಾ?**

ಅನುಭವಿಸಿದ್ದೇನೆ. ಬರಹಗಾರನೊಬ್ಬನ/ಳ ಜಡತೆ... ಅದೆಷ್ಟು ಕ್ರೂರ! ಯಾವ ಪದಗಳೂ ಮೂಡದಿದ್ದಾಗ ನೋವು ಆವರಿಸುತ್ತದೆ. ಬರೆದದ್ದು ತೃಪ್ತಿ ತರದೆ ಅದನ್ನು ತೆಗೆದು ಹಾಕುವಾಗ ಪಡುವ ನೋವಿದೆಯಲ್ಲ, ಅದು ಮಾತುಗಳಲ್ಲಿ ಹಿಡಿಯಲು ಅಸಾಧ್ಯ. ಆದರೆ, ದಿಢೀರನೆ ಎಲ್ಲಿಂದಲೋ ಹಾಯುವ ಬರಹದ ಓಘ ಹಲವೊಮ್ಮೆ ಕಥೆ ಎಷ್ಟೇ ಕ್ರೂರವಾಗಿದ್ದರೂ ನಮ್ಮನ್ನದು ಪುಲಕಿತಗೊಳಿಸುತ್ತದೆ. ಪದಗಳು ನಿಜಕ್ಕೂ ವಿಸ್ಮಯತರುವಂತಹವು! ಸರಿಯಾಗಿ ಅವು ಹೊಂದಿಕೆಯಾದಾಗ ಮೈ ಜುಮ್ಮೆಂದು, ಸಂತೋಷ ದುಪ್ಪಟ್ಟುಗೊಳ್ಳುತ್ತದೆ. ಮುಂದೆ ಏನು ಬರೆಯುವುದೆಂದು ತೋಚದೆ ಕೆಲವಾರು ಬಾರಿ ನಾನೂ ಗಲಿಬಿಲಿಗೊಂಡು ನಿಂತಿದ್ದೇನೆ. ಆದರದು ಸಾಹಸಮಯ ಗಳಿಗೆ. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನನ್ನದು ಅಷ್ಟಾಗಿ ಕಾಡಿಲ್ಲ. ಆ ಕ್ಲಿಷ್ಟ ಭಾಗಕ್ಕಾದ ಉತ್ತರ ಎಲ್ಲಾದರೂ ಇರುತ್ತದೆ, ಸೂಕ್ತ ಸಮಯದಲ್ಲಿ ಅದು ಕಾಣಿಸಿಕೊಳ್ಳುತ್ತದೆ ಎಂದೇ ನಂಬುತ್ತೇನೆ.

◆ **ಕನಕರಾಜ್: ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ನೀವು ಮತ್ತಷ್ಟು ವಿಸ್ತರಿಸಿದ್ದೀರಿ. 'ಹೊಸ ಕಾದಂಬರಿ'ಯ ತಂತ್ರ, ಬರೆಯುತ್ತಿರುವಾಗ ಅದರಷ್ಟಕ್ಕೇ ಘಟಿಸಿದ್ದಾ ಅಥವಾ ಪ್ರಜ್ಞಾಪೂರ್ವಕವಾಗಿ ತೆಗೆದುಕೊಂಡ ನಿರ್ಧಾರವಾಗಿರುತ್ತದಾ?**

ಯಾವುದೇ ಪೂರ್ವ ಸಿದ್ಧತೆಗಳಿಲ್ಲದೆಯೇ ನಾನು ಬರೆಯಲು ತೊಡಗುವುದು. ಅದುವೇ ಸವಾಲಿನ ವಿಷಯವೂ, ಸ್ಫೂರ್ತಿಯ ಕಿಡಿಯೂ. ಈ ಮುಂಚೆ ನಾನು ಹೇಳಿದಂತೆ, ಬರೆಯುವ ಕ್ರಿಯೆ ನನಗೆ ಸಾಹಸಮಯವಾದುದು; ನನಗೇ ಗೊತ್ತಿಲ್ಲದೇ ನನ್ನ ಮನಸ್ಸಿನೊಳಗಿರುವ ಸಂಗತಿಗಳನ್ನು ಹೆಕ್ಕಿ ತೆಗೆಯುವುದು. ಹಾಗಾಗಿ ನಾನು ಪ್ರಜ್ಞಾಪೂರ್ವಕವಾದ ತೀರ್ಮಾನಗಳನ್ನು